## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ 20 ತಾಲ್ಲೂಕುಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲು ಹಾಗೂ ಪರೀಕ್ಷಾ ಉಪಕರಣಗಳನ್ನು ಖರೀದಿಸಲು ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**
1. ಮುಖ್ಯ ಇಂಜನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆರವರ ಪತ್ರ ಸಂಖ್ಯೆ: ಮುಇಂ/ಪಂರಾಇಂಇ/ರಸ್ತೆ ಶಾಖೆ/ತಾಂ.ಸ-4/ಸ.ಇಂ-4/2012-13, ದಿನಾಂಕ:14.02.2014.
2. ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಸಭೆಯ ನಡವಳಿ ದಿನಾಂಕ:25.02.2014.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 32 ಗ್ರಾನೀಸ(2)2014, ದಿ:04.03.2014.
4. SLSSC ಸಭೆಯ ನಡವಳಿ ದಿನಾಂಕ:27.10.2014.

---

**ಪೀಠಿಕೆ:**

ರಾಜ್ಯದ 80 ತಾಲ್ಲೂಕುಗಳಲ್ಲಿ **NRDWP – Support Activity** ಘಟಕದಡಿ ಪ್ರಯೋಗಾಲಯಗಳನ್ನು ಸ್ಥಾಪಿಸಲು ಪರೀಕ್ಷಾ ಉಪಕರಣಗಳನ್ನು (ಭೌತಿಕ ಮತ್ತು ರಾಸಾಯನಿಕ ಅಂಶಗಳ) ಖರೀದಿಸಲು, ಮುಖ್ಯ ರಸಾಯನ ತಜ್ಞರ ಸಲಹೆಯಂತೆ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಕನಿಷ್ಠ ದರಗಳನ್ನು ನಮೂದಿಸಿರುವ ಸಂಸ್ಥೆಯಾದ **ಮೆ॥ Prasad Rayipati of Ray Environ**ರವರ ಟೆಂಡರ್ ಅಂಗೀಕರಿಸಿ **80** ತಾಲ್ಲೂಕು ಮಟ್ಟದ ಪ್ರಯೋಗಾಲಯಗಳನ್ನು ಸ್ಥಾಪಿಸಲು ಪರೀಕ್ಷಾ ಉಪಕರಣಗಳನ್ನು ಖರೀದಿಸಲು ಉಲ್ಲೇಖಿತ (3)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಿದೆ. ಪ್ರಸ್ತುತ ಪುನಃ **20** ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಪ್ರಯೋಗಾಲಯಗಳನ್ನು ಸ್ಥಾಪಿಸಲು ಪರೀಕ್ಷಾ ಉಪಕರಣಗಳನ್ನು ಖರೀದಿಸಲು ಒಂದು ಪ್ರಯೋಗಾಲಯಕ್ಕೆ ತಲಾ **ರೂ.33.00ಲಕ್ಷ** ದರದಲ್ಲಿ 20 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಪರೀಕ್ಷಾ ಪ್ರಯೋಗಾಲಯಗಳಿಗಾಗಿ ಒಟ್ಟು **ರೂ.660.00ಲಕ್ಷ** ಮತ್ತು ಮೂರು ವರ್ಷಗಳ ವಾರ್ಷಿಕ ಪರೀಕ್ಷೆ ಮೊತ್ತ ಪ್ರತಿ ನೀರಿನ ಮಾದರಿ ಪರೀಕ್ಷೆಗೆ **ರೂ.950/–** ದರದಲ್ಲಿ ಒಟ್ಟು **ರೂ.1710.00ಲಕ್ಷ**ಕ್ಕೆ ಅನುಮೋದನೆ ನೀಡಬೇಕಾಗಿದೆ. ಈ ಸಲುವಾಗಿ **ದಿನಾಂಕ:27.10.2014** ರಂದು ನಡೆದ **SLSSC ಸಭೆಯ** ನಿರ್ಣಯದಂತೆ ಪ್ರತಿ ಮಾದರಿಯ ಪರೀಕ್ಷೆ ವೆಚ್ಚ **ರೂ.950/–ಕ್ಕೆ** ಆದೇಶ ನೀಡುವ ಪ್ರಸ್ತಾಪಕ್ಕೆ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 110 ಗ್ರಾನೀಸ(2) 2014 ಬೆಂಗಳೂರು, ದಿನಾಂಕ: 23.03.2015**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ರಾಜ್ಯದ **20** ತಾಲ್ಲೂಕುಗಳಲ್ಲಿ **NRDWP – Support Activity ಘಟಕದಡಿ ರೂ.660.00ಲಕ್ಷ (ಆರು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಮಾತ್ರ)** ಅಂದಾಜಿನಲ್ಲಿ 20 ಪ್ರಯೋಗಾಲಯಗಳನ್ನು ಸ್ಥಾಪಿಸಲು ಹಾಗೂ **1ನೇ ವರ್ಷ, 2ನೇ ವರ್ಷ** ಮತ್ತು **3ನೇ ವರ್ಷ**ದ ಪ್ರಯೋಗಾಲಯಗಳ ಪ್ರತಿ ನೀರಿನ ಮಾದರಿ ಪರೀಕ್ಷೆಗೆ **ರೂ.950/–**ರ ದರದಲ್ಲಿ ಒಟ್ಟಾರೆ **ರೂ.1710.00ಲಕ್ಷ ( ಒಂದು ಸಾವಿರದ ಎಳು ನೂರ ಹತ್ತು ಲಕ್ಷ ರೂಪಾಯಿಗಳು ಮಾತ್ರ)** ಅಂದಾಜಿಗೆ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. ಪ್ರಸ್ತುತ **20** ತಾಲ್ಲೂಕುಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲು ಹಾಗೂ ಪರೀಕ್ಷಾ ಉಪಕರಣಗಳನ್ನು ಖರೀದಿಸಲು **NRDWP – Support Activity / WQM&SP ಘಟಕದಡಿ 2014–15**ರ ಸಾಲಿನಲ್ಲಿ ಲಭ್ಯವಿರುವ ಅನುದಾನದಡಿ ಟೆಂಡರ್ ನಿಬಂಧನೆಗಳನ್ವಯ ವೆಚ್ಚ ಭರಿಸಲು ಮತ್ತು **2015–16**ರಲ್ಲಿ ಅಗತ್ಯವಾದ ಬಾಕಿ ಅನುದಾನವನ್ನು ಸದರಿ ಕಾರ್ಯಕ್ರಮದಡಿ **CE/RDWSD** ಒದಗಿಸಿಕೊಳ್ಳತಕ್ಕದ್ದು.

- ನೀರಿನ ಮಾದರಿ ಪರೀಕ್ಷೆ ಸಮರ್ಪಕವಾಗಿ ಮಾಡಿ ಅವುಗಳ ವಿವರಗಳನ್ನು IMISನಲ್ಲಿ ಸದರಿ ಸಂಸ್ಥೆ ದಾಖಲಿಸಬೇಕು. ಇವುಗಳ ವಿವರಗಳನ್ನು ಸ್ಥಳೀಯ BRC/CRCs ಹಾಗೂ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆಯ ಇಂಜಿನಿಯರಿಂಗ್ ವಿಭಾಗ ಪರಿಶೀಲಿಸಿ ಧೃಢೀಕರಿಸಬೇಕು.
- ಸ್ಥಾಪಿತ ಪ್ರಯೋಗಾಲಯಗಳು GoI - NRDWP –WQMSP-Protocal ಪ್ರಕಾರ ಇವೆ ಎನ್ನುವುದನ್ನು ಅಲ್ಲಿನ ಗ್ಲಾಸ್ ವೇರ್ಸ್, ಟೆಸ್ಟಿಂಗ್ ಎಕ್ವಿಪ್‌ಮೆಂಟ್‌ಗಳ ಮಾದರಿ, ಗುಣಮಟ್ಟವನ್ನು Tender Documents ನನ್ವಯ ಪರಿಶೀಲಿಸಿ, ಸ್ಥಳೀಯ RDWSD ಹಾಗೂ ಮುಖ್ಯ ರಸಾಯನ ತಜ್ಞರು, SRI, ರಾಜ್ಯದ ಗಣಿ ಮತ್ತು ಭೂವಿಜ್ಞಾನಿ ಇಲಾಖೆರವರು ಬಿಲ್ ಪಾವತಿಗೆ ಮುನ್ನ ಧೃಢೀಕರಿಸಬೇಕು. ಈಗಾಗಲೇ ಸ್ಥಾಪಿಸಿರುವ 80 ಪ್ರಯೋಗಾಲಯಗಳ ಗುಣಮಟ್ಟ ಹಾಗೂ ಕಾರ್ಯಕ್ಷಮತೆಯನ್ನು ಸಹ ಪರಿಶೀಲಿಸಿ ಆಯಾ ಜಿಲ್ಲಾ ಪಂಚಾಯಿತಿಯ

--2

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ/ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ತಕ್ಷಣ CE,RDWSD ಹಾಗೂ ಸರ್ಕಾರಕ್ಕೆ ವರದಿ ಮಾಡಬೇಕು.

3. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ **ಸಂಖ್ಯೆ: ಗ್ರಾಅಪ/130/ಪಿಬಿಎಸ್/2015, ದಿನಾಂಕ:13.02.2015ರನ್ವಯ** ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15.3.15

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇಮೇಲ್:rk3452000@gmail.com
ಫೋನ್:22240508, ಫ್ಯಾಕ್ಸ್:22233175

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಚೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ / ವಿಕಾಸಸೌಧ ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
9. ಬೆಂಗಳೂರು. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು-09
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂಗಳೂರು-09.
12. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು.
13. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
14. ರಾಜ್ಯದ ಎಲ್ಲಾ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು.
15. ಎಲ್ಲಾ (38) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
17. ಆಯುಕ್ತರು, RDWSD ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು / ಇವರುಗಳ ಆಪ್ತ ಸಹಾಯಕರು.
18. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
19. ಉಪ ನಿರ್ದೇಸಕರು, Network Management Center (TNMC), ನಂ.49, ಖನಿಜ ಭವನ, ರೇಸ್ ಕೋರ್ಸ ರಸ್ತೆ, ಬೆಂಗಳೂರು.
20. ಎಲ್ಲಾ (30) ಜಿಲ್ಲಾ ಖಜಾನಾಧಿಕಾರಿಗಳು.
21. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
22. ರಾಜ್ಯದ ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ಮತ್ತು ಗ್ರಾಕು.ನೀ ಮತ್ತು ನೈರ್ಮಲ್ಯ ಉಪ ವಿಭಾಗಗಳು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತಃ ಹೆಚ್ಚುವರಿ ಪ್ರತಿಗಳು.